ಗೆ,

**ಸನ್ಮಾನ್ಯ, ಶ್ರೀ ಬಿ.ಸಿ. ನಾಗೇಶ್** ದಿನಾಂಕ : 16/12/2021

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಸ್ಥಳ : ಶಿವಮೊಗ್ಗ

ಕರ್ನಾಟಕ ಸರ್ಕಾರ ಸಚಿವಾಲಯ

ವಿಧಾನ ಸೌಧ, ಬೆಂಗಳೂರು.

ಇಂದ,

ಮೋಹನರಾಜ ಜಿ

ಪದವೀಧರ ಪ್ರಾಥಮಿಕ ಆಂಗ್ಲ ಭಾಷ ಶಿಕ್ಷಕ ಉದ್ಯೋಗಾಕಾಂಕ್ಷಿ,

ಗರ್ತಿಕೆರೆ, ಕಮ್ಮಚ್ಚಿ ಪೋಸ್ಟ್,

ಹೊಸನಗರ ತಾ,

ಶಿವಮೊಗ್ಗ.

ಇ-ಮೇಲ್ : subhashraja153@gmail.com

ಮೊಬೈಲ್ ಸಂಖ್ಯೆ: 9731992153

ಮಾನ್ಯರೇ,

**ವಿಷಯ:** ಪದವೀಧರಪ್ರಾಥಮಿಕಆಂಗ್ಲ ಭಾಷ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಹಳೆಯ ನಿಯಮಾವಳಿಗಳೆ ಮುಂದುವರೆದಿರುವ ಕುರಿತು.

**ಉಲ್ಲೇಖ:** ೧) ನೇಮಕಾತಿಅಧಿಸೂಚನೆ ಸಂಖ್ಯೆ: ಇ2 : ಪ.ಪ್ರಾ.ಶಿ.ನೇ: 2018-19/24/2018-19, ದಿನಾಂಕ:05ನೇ ಮಾರ್ಚ 2019.

೨) ಕರ್ನಾಟಕ ಸರ್ಕಾರಅಧಿಸೂಚನೆ ಸಂಖ್ಯೆ: ಇಡಿ94ಪಿಬಿಎಸ್2018 (ಭಾಗ-3), ಕರ್ನಾಟಕ ಸರ್ಕಾರ ಸಚಿವಾಲಯ, ೬ನೇ ಮಹಡಿ, ಬಹುಮಾಡಿಕಟ್ಟಡ ಬೆಂಗಳೂರು, ದಿನಾಂಕ: 10/12/2021.

*****

ಈ ಮೆಲ್ಕಂಡ ವಿಷಯ ಮತ್ತುಉಲ್ಲೇಖಕ್ಕೆ ಸಂಬಂಧಿಸಿದಂತೆ ಮೋಹನರಾಜ ಜಿ. ಆದ ನಾನು 2009 ಮತ್ತು2011ನೇ ಸಾಲಿನಲ್ಲಿ **ಡಿ.ಇಡಿ** ತರಬೇತಿಯನ್ನು ಮುಗಿಸಿದ್ದು . 2011 ಮತ್ತು 2014 ರ ಸಾಲಿನಲ್ಲಿ ಮೂರು ವರ್ಷದ ಪದವಿಯಲ್ಲಿ ಕನ್ನಡ ಮತ್ತು ಇಂಗ್ಲೀಷ್ ನ್ನು ಭಾಷೆ ವಿಷಯಗಳಾಗಿ, ಇಂಗ್ಲೀಷ್ ಸಾಹಿತ್ಯ, ಮನೋಶಾಸ್ತ್ರ ಮತ್ತು ಸಮಾಜಶಾಸ್ತ್ರವನ್ನು ಐಚ್ಛಿಕ ವಿಷಯಗಳಾಗಿ ಸರ್ಕಾರಿ ಪ್ರಥಮದರ್ಜೆ ಕಾಲೇಜು ತೀರ್ಥಹಳ್ಳಿ, ಕುವೆಂಪು ವಿಶ್ವವಿದ್ಯಾಲಯ ಶಂಕರಘಟ್ಟದಲ್ಲಿ ಅಭ್ಯಾಸ ಮಾಡಿರುತ್ತೇನೆ. 2014 ಮತ್ತು16ನೇ ಸಾಲಿನಲ್ಲಿ ಇಂಗ್ಲೀಷ್ ವಿಭಾಗದ ಕುವೆಂಪು ವಿಶ್ವವಿದ್ಯಾಲಯದಲ್ಲಿ ಸ್ನಾತಕೊತ್ತರ ಪದವಿ ಪಡೆದಿರುತ್ತೇನೆ. 2017-19 ನೇ ಸಾಲಿನಲ್ಲಿ ದಾವಣಗೆರೆ ವಿಶ್ವವಿದ್ಯಾಲಯದಿಂದ **ಬಿ.ಇಡಿ** ಪದವಿಯನ್ನು ಪಡೆದಿರುತ್ತೇನೆ. 2015 ಸೆಪ್ಟಂಬರ್ ಮಾಹೆಯಲ್ಲಿ ನಡೆದ ಕರ್ನಾಟಕ ಪ್ರಾಥಮಿಕ ಶಿಕ್ಷಕರ ಅರ್ಹತ ಪರೀಕ್ಷೆಯಲ್ಲಿ (ಟೀಇಟಿ) ಪೇಪರ್– ೦೧ ಮತ್ತು ೦೨ ರಲ್ಲು ಅರ್ಹತೆ ಹೊಂದಿರುತ್ತೇನೆ. ಆದರು ಕೂಡ ಇದುವರೆಗು ಕರ್ನಾಟಕ ಸರ್ಕಾರ ಪ್ರಾಥಮಿಕ ಶಿಕ್ಷಕರ ನೇಮಕಾತಿಗಾಗಿ ಕರೆದ ಯಾವ ಪರೀಕ್ಷೆಗಳನ್ನು ಬರೆಯಲು ಸಾಧ್ಯವಾಗಿರುವುದಿಲ್ಲ. ಈ ಬಾರಿಯಾದರು ಪದವೀಧರ ಪ್ರಾಥಮಿಕ ಶಿಕ್ಷಕ (ಭಾಷೆ-ಆಂಗ್ಲ) ನಿಯಮವಳಿಗಳು ಬದಲಾಗಬಹುದು ಎಂಬ ನಿರೀಕ್ಷೆಯಲ್ಲಿದ್ದ ನನಗೆ ಸರ್ಕಾರ ಹೊರಡಿಸಿರುವ ಸಿ & ಆರ್ ನಿಯಮದಲ್ಲಿ ಯಾವುದೆ ಬದಲಾವಣೆಯಾಗದಿರುವುದು ಆತಂಕಕ್ಕೆ ಗುರಿ ಮಾಡಿದೆ.

ಉಲ್ಲೇಖ (೧)ರಂತೆ ಪದವೀಧರ ಪ್ರಾಥಮಿಕ ಶಿಕ್ಷಕ **(ಭಾಷೆ-ಆಂಗ್ಲ)** ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಆಂಗ್ಲ ಭಾಷೆಯನ್ನು ಐಚ್ಛಿಕ ವಿಷಯವಾಗಿ ಮೂರು ವರ್ಷವು ಅಧ್ಯಯನ ಮಾಡಿರಬೇಕು ಮತ್ತು ಕನ್ನಡ, ಹಿಂದಿ,ಮಾರಾಠಿ, ಉರ್ದು, ತೆಲಗು, ತಮಿಳು, ಕೊಂಕಣಿ, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಮತ್ತು ಭೂಗೋಳಶಾಸ್ತ್ರ ಈ ಯಾವುದಾದರು ವಿಷಯಗಳ ಪೈಕಿ ಒಂದು ವಿಷಯವನ್ನು ಮೂರು ವರ್ಷವು ಐಚ್ಛಿಕ ವಿಷಯವಾಗಿ ಅಧ್ಯಯನ ಮಾಡಿರಬೇಕು ಎಂಬ ನಿಯಮ ರೂಪಿಸಲಾಗಿತ್ತು. 2021 ಜನವರಿಯಲ್ಲಿ ಪದವೀಧರ ಪ್ರಾಥಮಿಕ ಶಿಕ್ಷಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಹೊಸ ಸಿ &ಆರ್ ನಿಯಮವಳಿಯನ್ನು ಇಲಾಖೆಯು ಪ್ರಕಟಿಸಿದ್ದು ಆಕ್ಷೇಪವನ್ನು ವ್ಯಕ್ತಪಡಿಸಲು ಅವಕಾಶವನ್ನು ನೀಡಿತ್ತು. ಇದರಂತೆಯೆ ಹಲವು ಉದ್ಯೋಗಾಕಾಂಕ್ಷಿಗಳು ಆಕ್ಷೇಪವನ್ನು ವ್ಯಕ್ತಪಡಿಸಿದ್ದು. ಪದವಿಧರ ಆಂಗ್ಲ ಭಾಷೆ ಪ್ರಾಥಮಿಕ ಶಿಕ್ಷಕರ ನೇಮಕಾತಿ ನಿಯಮಗಳಿಗೆ ಸಂಬಂದಿಸಿದಂತೆ ಆಂಗ್ಲ ಭಾಷೆಯನ್ನು ಐಚ್ಛಿಕ ವಿಷಯವಾಗಿ ಮೂರು ವರ್ಷವು ಅಧ್ಯಯನ ಮಾಡಿರಬೇಕು ಮತ್ತು ಕನ್ನಡ, ಹಿಂದಿ,ಮಾರಾಠಿ, ಉರ್ದು, ತೆಲಗು, ತಮಿಳು, ಕೊಂಕಣಿ, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಮತ್ತು ಭೂಗೋಳಶಾಸ್ತ್ರಗಳ ಜೊತೆಗೆ ಸಮಾಜಶಾಸ್ತ್ರ, ಮನೋಶಾಸ್ತ್ರ, ಪತ್ರಿಕೋಧ್ಯಮ ಮತ್ತು ಶಿಕ್ಷಣ ವಿಷಯಗಳನ್ನು ಪದವಿಯಲ್ಲಿ ಅಭ್ಯಾಸಿಸಿದವರಿಗು ಅವಕಾಶ ನೀಡಿ ಸಿ &ಆರ್ ನಿಯಮವಳಿಯನ್ನು ತಿದ್ದುಪಡಿ ಮಾಡುವಂತೆ ಸನ್ಮಾನ್ಯ ಶಿಕ್ಷಣ ಸಚಿವರಲ್ಲಿ ಕೋರಲಾಗಿತ್ತು. ಅದರಂತೆಯೆ ಶಿಕ್ಷಣ ಸಚಿವರು ಕೂಡ ತಿದ್ದುಪಡಿ ಮಾಡುವ ಭರವಸೆಯನ್ನು ನೀಡಿದ್ದರು. ಸುವರ್ಣ 24x7ನಲ್ಲಿ ನಡೆದ ಪೋನ್ ಇನ್ ಸಂದರ್ಶನದಲ್ಲಿ ಪದವಿಧರ ಆಂಗ್ಲ ಭಾಷೆ ಪ್ರಾಥಮಿಕ ಶಿಕ್ಷಕರ ನೇಮಕಾತಿ ನಿಯಮವನ್ನು ತಿದ್ದುಪಡಿಯಲ್ಲಿ ಮೂರು ವರ್ಷದ ಪದವಿಯಲ್ಲಿ

ಐಚ್ಛಿಕ ವಿಷಯವಾಗಿ ಆಂಗ್ಲ ಭಾಷೆಯ ಜೊತೆ ಸಮಾಜಶಾಸ್ತ್ರವನ್ನು ಅಭ್ಯಾಸಿಸಿದವರಿಗೆ ಅವಕಾಶ ನೀಡುವ ಮೂಲಕ ಪ್ರಾಥಮಿಕ ಶಾಲೆಗಳಲ್ಲಿ ಆಂಗ್ಲ ಭಾಷ ಶಿಕ್ಷರ ಕೊರತೆಯನ್ನು ನೀಗಿಸುವುದಾಗಿ ಭರವಸೆಯನ್ನು ನೀಡಿರುತ್ತಾರೆ ಮತ್ತು ತದನಂತರದ ದಿನಮಾನಗಳಲ್ಲಿ ಸಚಿವರ ಅಪ್ತ ಕಾರ್ಯದರ್ಶಿಗಳಿಗೆ ಪೋನ್‌ಕರೆಯ ಮೂಲಕ ಸಂಪರ್ಕಿಸಿ ಸದರಿ ವಿಷಯದ ಬಗ್ಗೆ ವಿಚಾರಿಸಿದಾಗ ಅವರು ಕೂಡ ನಿಯಮಾವಳಿಗಳು ತಿದ್ದುಪಡಿಯಾಗಿರುವುದರ ಬಗ್ಗೆ ತಿಳಿಸಿರುತ್ತಾರೆ.

ಉಲ್ಲೇಖ (೨) ರಂತೆ ದಿನಾಂಕ: 10/12/2021 ರಂದು ಕರ್ನಾಟಕ ಸರ್ಕಾರದ ಅಧಿಕೃತ "ಗೆಜೆಟಿಯರ್ ನಲ್ಲಿ ಪದವೀಧರ ಪ್ರಾಥಮಿಕ ಶಿಕ್ಷಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಹೊಸ ಸಿ &ಆರ್ ನಿಯಮವಳಿಯನ್ನು ಇಲಾಖೆಯು ಪ್ರಕಟಿಸಿದ್ದು. ಇದರಲ್ಲಿ ಬಿ.ಇ ಅಭ್ಯಾಸಿದವರಿಗು ಪರೀಕ್ಷೆ ತೆಗೆದುಕೊಳ್ಳುವ ಅವಕಾಶ ಮತು ಪದವೀಧರ ಸಮಾಜ ವಿಜ್ಞಾನ ಶಿಕ್ಷಕ ಹುದ್ದೆಗೆ ಸಮಾಜಶಾಸ್ತ್ರವನ್ನು ಪದವಿಯಲ್ಲಿ ಐಚ್ಛಿಕ ವಿಷಯವಾಗಿ ಅಭ್ಯಸಿಸಿರುವವರಿಗು ಅವಕಾಶ ನೀಡಿ ತಿದ್ದುಪಡಿ ಮಾಡಲಾಗಿದೆ.

ಅಷ್ಟೆ ಅಲ್ಲದೆ ಪದವೀಧರ ಸಮಾಜ ವಿಜ್ಞಾನ ಶಿಕ್ಷಕ ಹುದ್ದೆಗೆ ಸಮಾಜ ವಿಜ್ಞಾನದ ಸಮೂಹವಿಷಯಗಳಾದ ಇತಿಹಾಸ/ ಅರ್ಥಶಾಸ್ತ್ರ/ ಭೂಗೋಳ/ರಾಜಕೀಯ ವಿಜ್ಞಾನ**/ಸಮಾಜಶಾಸ್ತ್ರ** ದ ಜೊತೆಗೆ ಭಾಷ ಸಮೂಹ ವಿಷಯಗಳಾದ ಕನ್ನಡ/**ಆಂಗ್ಲ ಭಾಷೆ**/ ಹಿಂದಿ/ಮರಾಠಿ/ ಉರ್ದು/ ಸಂಸ್ಕೃತ ವಿಷವನ್ನು ಐಚ್ಛಿಕ ವಿಷಯವಾಗಿ ಅಭ್ಯಾಸಿಸಿರುವವರಿಗೆ ಅವಕಾಶವನ್ನು ನೀಡಿ ಸಿ ಮತ್ತು ಆರ್ ನಿಯಮವಳಿಯನ್ನು ತಿದ್ದುಪಡಿ ಮಾಡಲಾಗಿದೆ. ಆದರೆ ಪದವೀಧರ ಪ್ರಾಥಮಿಕ ಶಿಕ್ಷಕ **(ಭಾಷೆ-ಆಂಗ್ಲ)** ಹುದ್ದೆಗಳಿಗೆ ಸಂಬಂದಿಸಿದಂತೆ ಐಚ್ಛಿಕ ವಿಷಯವಾಗಿ ಭಾಷ ಸಮೂಹ ವಿಷಯವಾದ **ಆಂಗ್ಲ ಭಾಷೆ** ಮತ್ತು ಸಮಾಜ ವಿಜ್ಞಾನದ ಸಮೂಹ ವಿಷಯವಾದ **ಸಮಾಜಶಾಸ್ತ್ರ** ವಿಷಯವನ್ನು ಅಭ್ಯಾಸಿಸಿದ ಅಭ್ಯಾರ್ಥಿಗಳು ಅನರ್ಹರೆಂದು ಪರಿಗಣಿಸಿ ಅವಕಾಶ ಕೊಡದೆ ಪದವೀಧರ ಪ್ರಾಥಮಿಕ ಶಿಕ್ಷಕ **(ಭಾಷೆ-ಆಂಗ್ಲ)** ಹುದ್ದೆಗಳಿಗೆ ಸಂಬಂದಿಸಿದಂತೆ ಹಳೆಯ ನಿಯಮಾವಳಿಗಳು ಅಂದರೆ ಉಲ್ಲೇಖ (೧) ರಂತೆಯೆ ಮುಂದುವರೆದಿರುವುದು ಎಷ್ಟು ಸರಿ? ಎಂಬುದು ನನ್ನನ್ನು ಒಳಗೊಂಡಂತೆ ಸಾವಿರಾರು ವಿದ್ಯಾರ್ಥಿಗಳ ಆತಂಕಕ್ಕೆ ಕಾರಣವಾಗಿದೆ. 2012 ರ ಮೊದಲು ಪ್ರಾಥಮಿಕ ಶಿಕ್ಷಕರ ಆಯ್ಕೆಗಾಗಿ ಕರೆಯುವ ಪರೀಕ್ಷೆ ಸಂಬಂದಿಸಿದಂತೆ ಉಲ್ಲೇಖ (೧) ರಂತೆ ಯಾವ ನಿಯಮಗಳು ಇಲ್ಲದ ಕಾರಣ ಮತ್ತು ಪದವೀಧರ ಪ್ರಾಥಮಿಕ ಶಿಕ್ಷಕ ಎಂಬ ಪರಿಕಲ್ಪನೆಯೆ ಇಲ್ಲದ ಕಾಲಘಟ್ಟದಲ್ಲಿ ನಾನು ನನಗೆ ಸಮೀಪವಾದ ಕಾಲೇಜಿನಲ್ಲಿ ಪದವಿಯನ್ನು ಆಂಗ್ಲ ಭಾಷೆ, ಮನೋಶಾಸ್ತ್ರ ಮತ್ತು ಸಮಾಜಶಾಸ್ರ ವಿಷಯಗಳನ್ನು ಐಚ್ಛಿಕ ವಿಷಯಗಳಾಗಿ ವ್ಯಾಸಂಗ ಮಾಡಿರುತ್ತೇನೆ.

ಈ ಮೇಲ್ಕಂಡ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದಾಗ ಪ್ರಾಥಮಿಕ ಶಿಕ್ಷಕ **(ಭಾಷೆ-ಆಂಗ್ಲ)** ಹುದ್ದೆಗೆ ಆಯ್ಕೆಯಾಗುವವರ ಕೊರೆತೆಗೆ ಮತ್ತು ಇಲಾಖೆಯು ಜಾರಿಗೊಳಿಸಿದ ಹೊಸ ನಿಯಮವಳಿಗಳು ನನ್ನನ್ನು ಒಳಗೊಂಡಂತೆ ಸಾವಿರಾರು ವಿದ್ಯಾರ್ಥಿಗಳ **ಡಿ.ಇಡಿ, ಪದವಿ ಮತ್ತು ಬಿ.ಇಡಿ ಪದವಿಯನ್ನು** ವ್ಯರ್ಥಗೊಳಿಸಲು ಕಾರಣವಾಗಿದೆ. ಪ್ರಾಥಮಿಕ ಶಿಕ್ಷಕರಿಗೆ ಮನೋಶಾಶ್ತ್ರದ ಜ್ಞಾನದ ಅಗತ್ಯತೆಯನ್ನು ಪರಿಗಣಿಸಿ ಜೊತೆಗೆ ಆಂಗ್ಲ ಭಾಷೆಯ ಜೊತೆಗೆ ಸಮಾಜಶಾಸ್ತ್ರವನ್ನು ಪದವಿಯಲ್ಲಿ ಐಚ್ಛಿಕ ವಿಷಯವಾಗಿ ಅಭ್ಯಸಿಸಿರುವುದರಿಂದ ಆಂಗ್ಲ ಮತ್ತು ಸಮಾಜ ವಿಜ್ಞಾನ ಎರಡು ವಿಷಯಗಳನ್ನು ಪ್ರಾಥಮಿಕ ಶಾಲೆಯಲ್ಲಿ ಬೋಧಿಸಲು ಅರ್ಹನೆಂದು ಪರಿಗಣಿಸಿ ಅವಕಾಶ ನೀಡಿದಲ್ಲಿ, ಪ್ರಾಥಮಿಕ ಶಾಲೆಗಳಲ್ಲಿ ಉಂಟಾಗಿರುವ ಆಂಗ್ಲಾ ಭಾಷೆ ಶಿಕ್ಷಕರ ಕೊರತೆಯನ್ನು ನೀಗಿಸ ಬಹುದಾಗಿದೆ ಮತ್ತು ನನ್ನನ್ನು ಒಳಗೊಂಡಂತೆ ಸಾವಿರಾರು ಅಭ್ಯಾರ್ಥಿಗಳಿಗೆ ನ್ಯಾಯವದಗಿಸಿ ಅವಕಾಶ ನೀಡಿದಂತಾಗುತ್ತದೆ. ಆದ್ದರಿಂದ ಹೊಸದಾಗಿ ಪದವೀಧರ ಪ್ರಾಥಮಿಕ ಶಿಕ್ಷಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕ್ರಿಯೆ ಆರಂಭಿಸುವ ಮೊದಲೆ ಸದರಿ ಸಿ &ಆರ್ ನಿಯಮವಳಿಯನ್ನು ತಿದ್ದುಪಡಿ ಮಾಡುವ ಮೂಲಕ ಅವಕಾಶ ವಂಚಿತರಿಗೆ ಅವಕಾಶ ನೀಡಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ
ಮೋಹನರಾಜ ಜಿ.

ಪ್ರತಿಗಳು :

೧. ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಸಚಿವಾಲಯ ವಿಧಾನ ಸೌಧ, ಬೆಂಗಳೂರು.
೨. ಸನ್ಮಾನ್ಯ ಶ್ರೀ ಅಶ್ವಥ್ ನಾರಾಯಣ, ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಸಚಿವಾಲಯ ವಿಧಾನ ಸೌಧ, ಬೆಂಗಳೂರು.
೩. ಸನ್ಮಾನ್ಯ ಶ್ರೀ ಅರಗ ಜ್ಞಾನೇಂದ್ರ, ಗೃಹ ಮಂತ್ರಿಗಳು, ಕರ್ನಾಟಕ ಸರ್ಕಾರ ಸಚಿವಾಲಯ ವಿಧಾನ ಸೌಧ, ಬೆಂಗಳೂರು.
೪. ಸನ್ಮಾನ್ಯ ಶ್ರೀ ಜೆ.ಸಿ ಮಾಧುಸ್ವಾಮಿ, ಕಾನೂನು ಸಚಿವರು, ಕರ್ನಾಟಕ ಸರ್ಕಾರ ಸಚಿವಾಲಯ ವಿಧಾನ ಸೌಧ, ಬೆಂಗಳೂರು.
೫. ಸನ್ಮಾನ್ಯ ಶ್ರೀ ಸಿದ್ಧರಾಮಯ್ಯ, ವಿರೋಧ ಪಕ್ಷ ನಾಯಕರು, ಕೊಠಡಿ ಸಂಖ್ಯೆ ೧೬೦, ಮೊದಲ ಮಹಡಿ, ವಿಧಾನ ಸೌಧ, ಬೆಂಗಳೂರು.
೬. ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಮಾದ್ಯಮಿಕ ಶಿಕ್ಷಣ, ೬ನೆ ಮಹಡಿ, ೨ ನೇ ದ್ವಾರ, ಎಂ ಎಸ್ ಕಟ್ಟಡ, ಬೆಂಗಳೂರು.
೭. ಕಾರ್ಯದರ್ಶಿಗಳು, ಕಾನೂನು ವಿಭಾಗ, ೩೩, ನೆಲ ಮಹಡಿ, ವಿಧಾನ ಸೌಧ, ಬೆಂಗಳೂರು.
೮. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.